ಪರವಾನಿಗೆ ಪಡೆಯದ ಅಂಗಡಿಗಳ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಅಬಕಾರಿ ಅಧಿಕಾರಿಗಳು ಪರವಾನಿಗೆ ಪಡೆಯದ ಅಂಗಡಿಗಳ ಬಗ್ಗೆ ಏನೂ ಕ್ರಮ ಕೈಗೊಳ್ಳದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮ.

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಪರವಾನಿಗೆ ಪಡೆದಿರುವ ಅಂಗಡಿಗಳ ಸಂಖ್ಯೆ ಈ ಕೆಳಕಂಡಂತಿವೆ :

1)	ಸಾರಾಯಿ ಅಂಗಡಿಗಳು	93
2)	ಬಾರಗಳು ಅಂಗಡಿಗಳು	16
3)	ಚಿಲ್ಲರೆ ಮದ್ಯದಂಗಡಿಗಳು	40
4)	ಸಗಟು ಮದ್ಯದಂಗಡಿಗಳು (ಸಿಎಲ್-1)	02
5)	ಕ್ಲಬ್‌ಗಳು (ಸಿಎಲ್-4)	04

ಮೇಲಿನ ಎಲ್ಲಾ ಅಂಗಡಿಗಳು ಪರವಾನಿಗೆಯನ್ನು ಪಡೆದಿರುತ್ತವೆ.

ಆ) ಪರವಾನಿಗೆ ಪಡೆಯದ ಅಂಗಡಿಗಳು ಇರುವುದಿಲ್ಲ. ಆಂತೆಯೆ, ಪರವಾನಿಗೆ ಪಡೆಯದ ಅಂಗಡಿಗಳ ಬಗ್ಗೆ ಯಾವ ಕ್ರಮದ ಅವಶ್ಯಕತೆ ಇರುವುದಿಲ್ಲ.

ಇ) ಇಲ್ಲ ಆದ್ದರಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಗೋಕಾಕ್ ತಾಲ್ಲೂಕಿನ ಸುಣದೋಳ ನೀರಾವರಿ ಬ್ಯಾರೇಜ್ ದುರಸ್ಥಿ.

685 - ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ತಾಲ್ಲೂಕಿನ ಸುಣಧೋಳ ಗ್ರಾಮದ ಹತ್ತಿರ ಕಟ್ಟಲಾದ ನೀರಾವರಿ ಬ್ಯಾರೇಜು ಬಿದ್ದು ಹೋದ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಅದರ ದುರಸ್ಥಿಯ ಬಗ್ಗೆ ಸರಕಾರ ಕೈಗೊಂಡ ಕ್ರಮಗಳೇನು;

ಇ) ಅದು ಯಾವಾಗ ಪೂರ್ತಿಯಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವಯವರು) :

ಅ) ಬಂದಿದೆ.

ಆ) ಈ ಬಾಂಧಾರದ ದುರಸ್ಥಿಗಾಗಿ 29.80 ಲಕ್ಷ ರೂ.ಗಳ ಅಂದಾಜು ಪತ್ರಿಕೆಯನ್ನು

ತಯಾರಿಸಲಾಗಿದ್ದು, ಅಂದಾಜು ಪರಿಶೀಲನೆಯಲ್ಲಿದೆ.

ii) ಅನುದಾನದ ಲಭ್ಯತೆಗನುಗುಣವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದಲ್ಲಿರುವ ಬಾರ್ ಮತ್ತು ವೈನ್ ಸ್ಟೋರಗಳ ಪರವಾನಿಗೆ.

687 - ಶ್ರೀ ಟಿ.ಜಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಬಾರ್ ಮತ್ತು ರೆಸ್ಟೋರೆಂಟ್ ಹಾಗೂ ವೈನ್ ಸ್ಟೋರಗಳ ಸಂಖ್ಯೆ ಎಷ್ಟು?

2) ಇವುಗಳನ್ನು ತೆರೆಯಲು ಲೈಸನ್ಸ ನೀಡುವಾಗ ಏನೇನು ಕ್ರಮ ಅನುಸರಿಸಲಾಗುತ್ತಿದೆ? (ಪಟ್ಟಿಮಾಡಿ)

3) ಪ್ರಸ್ತುತ ಲೈಸನ್ಸ ಕೋರಿ ಬಂದಿರುವ ಅರ್ಜಿಗಳನ್ನು ಸಂಖ್ಯೆ ಎಷ್ಟು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

1) ಬಾರ್ ಮತ್ತು ರೆಸ್ಟೋರೆಂಟ್ (ಸಿಎಲ್-9) - 1449

ವೈನ್ ಸ್ಟೋರ್ (ಸಿಎಲ್-2) - 922

2) 1968ರ ಕರ್ನಾಟಕ ಅಬಕಾರಿ (ಭಾರತೀಯ ಮದ್ಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಾವಳಿಗಳ ಹಾಗೂ 1967ರ ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳು) ನಿಯಮಾವಳಿಗಳಲ್ಲಿ ನಿಗದಿ ಪಡಿಸಿರುವ ಕ್ರಮವನ್ನು ಪಾಲಿಸಿ ಸನ್ನದುಗಳನ್ನು ನೀಡಲಾಗುತ್ತಿದೆ. ವಿವರಗಳನ್ನು ಪಟ್ಟಿ ಮಾಡಿ ಅನುಬಂಧದಲ್ಲಿ ಸಲ್ಲಿಸಲಾಗಿದೆ.

3) ಪ್ರಸ್ತುತದಲ್ಲಿ ರಾಜ್ಯ ಸರ್ಕಾರದ ಪ್ರವಾಸೋದ್ಯಮದ ಅಭಿವೃದ್ಧಿ ನೀತಿಗೆ ಅನುಗುಣವಾಗಿ ಲೈಸನ್ಸ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ :

1) ಬಾರ್ ಮತ್ತು ರೆಸ್ಟೋರೆಂಟ್ (ಸಿಎಲ್-೯) - 02

ಅನುಬಂಧ

1) ಅರ್ಜಿದಾರರು ನಿಗದಿತ ಸನ್ನದು ಸಂದಾಯಿಸಿದ ಚಲನ್ ನಿಗದಿತ ನಮೂನೆಯಲ್ಲಿ ಹಾಗೂ ಇನ್ನಿತರ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ ಅವುಗಳನ್ನು ಪರಿಶೀಲಿಸುವುದು.

2) ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳು, ಸ್ಥಳ ತನಿಖೆ ನಡೆಸಿ ಮಹಜರ್ ಮಾಡುವುದು.